**ಪಿ.ಡಬ್ಲ್ಯೂ : 1 - ಮಹೇಶ**

**ಸಾಕ್ಷಿಗೆ ದಿನಾಂಕಃ 08.02.2024 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ :ಶ್ರೀ ಆರ್.ಎಂ.ಹೆಚ್. ವಕೀಲರಿಂದಃ**

ನಾನು ಪದವಿ ವಿದ್ಯಾಭ್ಯಾಸ ಮಾಡಿದ್ದೇನೆ. ನಮ್ಮ ಅಜ್ಜಿಯ ಆಸ್ತಿಗೆ ತೊಂದರೆಯಾಗಿರುವ ಕಾರಣ ನಾನು ನ್ಯಾಯಾಲಯಕ್ಕೆ ಬಂದಿದ್ದೇನೆ. ನಮ್ಮ ಅಜ್ಜಿಯ ಜಮೀನು ಗಾಣಾಳುವಿನಲ್ಲಿ ಇದೆ. ಸದರಿ ಸ್ವತ್ತು 2 ಎಕರೆ 38 ಗುಂಟೆ ಇದೆ. ನಾನು ನ್ಯಾಯಾಲಯದಲ್ಲಿ ಸಲ್ಲಿಸಿರುವ ಪ್ರಮಾಣ ಪತ್ರಕ್ಕೆ ನಮ್ಮ ವಕೀಲರು ನೀಡಿರುತ್ತಾರೆ. ಪ್ರಮಾಣ ಪತ್ರದಲ್ಲಿ ಇರುವ ವಿಚಾರ ನನಗೆ ಗೊತ್ತಿದೆ. ನಾಗಮ್ಮರವರಿಗೆ 4 ಜನ ಮಕ್ಕಳು. ಅವರೆಂದರೆ ಚಿಕ್ಕತಾಯಮ್ಮ, ಸಣ್ಣಮ್ಮ, ಕಮಲಮ್ಮ, ಶಿವಮಾದೇಗೌಡ.

2. ಚಿಕ್ಕತಾಯಮ್ಮ, ಸಣ್ಣಮ್ಮ, ಕಮಲಮ್ಮ ರವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ. ದೊಡ್ಡೇಗೌಡರವರು  ನಮ್ಮ ಅಜ್ಜಿಯ ತಂದೆ. ದೊಡ್ಡೇಗೌಡರವರ ತಂದೆ ಮರಿಕೊಂಡೇಗೌಡ. ಮರಿಕೊಂಡೇಗೌಡರವರಿಗೆ 1ನೇ ಮಲ್ಲಮ್ಮ ಮತ್ತು 2ನೇ ಮಲ್ಲಮ್ಮ ಎಂಬ ಇಬ್ಬರು ಹೆಂಡತಿಯರು. ದೊಡ್ಡೇಗೌಡರವರು ಮೊದಲನೇ ಹೆಂಡತಿ ಮಲ್ಲಮ್ಮನ ಮಗ. 2ನೇ ಹೆಂಡತಿ ಮಲ್ಲಮ್ಮನಿಗೆ  ಚಿಕ್ಕೇಗೌಡ ಮತ್ತು ನಾಗೇಗೌಢ ಇಬ್ಬರು ಮಕ್ಕಳು. 2ನೇ ಹೆಂಡತಿ ಮಲ್ಲಮ್ಮನಿಗೆ ಅಪ್ಪಯ್ಯ @ ಲಿಂಗೇಗೌಡ, ಚಿಕ್ಕೇಗೌಡ ಮತ್ತು ನಾಗೇಗೌಢ ಎಂಬ 3 ಜನ ಮಕ್ಕಳು ಎಂದರೆ ಸರಿಯಲ್ಲ. 1 ಮತ್ತು 2ನೇ ಪ್ರತಿವಾದಿಗಳು ಅಪ್ಪಯ್ಯರವರ ಮಕ್ಕಳು. ದಾವಾ ಸ್ವತ್ತಿನಲ್ಲಿ ದೊಡ್ಡೇಗೌಡರು 2 ಎಕರೆ ಆಸ್ತಿಯನ್ನು ಚಿಕ್ಕೇಗೌಡ ಮತ್ತು ನಾಗೇಗೌಡರವರಿಗೆ ಮಾರಾಟ ಮಾಡಿರುತ್ತಾರೆ. ಆ ಸ್ವತ್ತನ್ನು ಹಕ್ಕು ಖುಲಾಸೆ ಮಾಡಿಸಿಕೊಂಡಿರುತ್ತಾರೆ.  ಆ ಸ್ವತ್ತು ಅದೇ ದಿನ ದಿ: 24.07.1950 ರಂದು ಹಕ್ಕು ಖುಲಾಸೆ ಬರೆಸಿಕೊಂಡಿರುತ್ತಾರೆ. ನಾನು ಹಕ್ಕು ಕುಲಾಸೆ ಪತ್ರವನ್ನು ಹಾಜರುಪಡಿಸಿಲ್ಲ. ಅವರು ಹಕ್ಕು ಖುಲಾಸೆ  ಮಾಡಿರುವುದಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

3. ನಾಗಮ್ಮರವರ ಇತರೆ ಮಕ್ಕಳನ್ನು ಪಕ್ಷಗಾರರನ್ನಾಗಿ ಮಾಡಬೇಕಾಗಿದ್ದು, ನಾನು ಉದ್ದೇಶಪೂರ್ವಕವಾಗಿ ಆಸ್ತಿಯನ್ನು ಲಪಟಾಯಿಸಲು ಅವರನ್ನು

ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿಯಲ್ಲ. ನಮ್ಮ ಅಜ್ಜಿ ನಾಗಮ್ಮರವರೊಂದಿಗೆ ಚಿಕ್ಕಮೂಗಮ್ಮ, ಸುಬ್ಬಮ್ಮ, ಕುಂಡಮ್ಮ. ನಾಗೇಗೌಡ ಹುಟ್ಟಿರುತ್ತಾರೆ. ಅವರೆಲ್ಲರೂ ಪೌತಿಯಾಗಿರುತ್ತಾರೆ. ನಾಗಮ್ಮರವರೊಂದಿಗೆ ಹುಟ್ಟಿದವರು ಮೊದಲನೇಯವರು ನಾಗಮ್ಮ, 2 ನೇಯವರು ಮೂಗಮ್ಮ, 3 ನೇಯವರು ಸುಬ್ಬಮ್ಮ, 4 ನೇಯವರು ನಾಗೇಗೌಡ ಮತ್ತು 5 ನೇಯವರು ಗುಂಡಮ್ಮ ಎಂದರೆ ಸರಿಯಲ್ಲ. ನಾಗಮ್ ಮತ್ತು ಅವರೊಂದಿಗೆ ಹುಟ್ಟಿದವರು ಯಾರು ಜೀವಂತ ಇಲ್ಲ. ನಾಗಮ್ಮರವರಿಗೆ ಒಡಹುಟ್ಟಿದವರಿಗೆ ಹಕ್ಕು ಇರುವುದಿಲ್ಲ. ದೊಡ್ಡೇಗೌಡವರು ಮಗಳಿಗೆ ದಾನ ನೀಡಿರುತ್ತಾರೆ.

4. ದೊಡ್ಡೇಗೌಡರವರು ಕೇವಲ ಒಂದು ಎಕರೆ ಮಾತ್ರ ದಾನ ನೀಡಿದ್ದು, ಉಳಿಕೆ 2 ಎಕರೆಯನ್ನು ತನ್ನ 2 ನೇ ಹೆಂಡತಿ ಮಕ್ಕಳಿಗೆ ಮಾರಾಟ ಮಾಡಿದ್ದ ಎಂದರೆ ಸರಿಯಲ್ಲ. ಸರ್ವೆ ನಂ 7/2 ರಲ್ಲಿರುವ ಸ್ವತ್ತುಗಳು ದಾವಾ ಸ್ವತ್ತು 2 ಎಕರೆ 38 ಗುಂಟೆಗೆ ಸೇರಿರುತ್ತದೆ. ಆ ಸ್ವತ್ತಿನ ಪೈಕಿ ನಿಂಗಮ್ಮ ರವರಿಗೆ 4 ಗುಂಟೆ, ಎಸ್.ಬಿ. ಮೀನಾಕ್ಷಿ ರವರಿಗೆ ಹತ್ತುವರೆ ಗುಂಟೆ, ಚಿಕ್ಕೇಗೌಡ ಮತ್ತು ಚಿಕ್ಕೇಗೌಡ ರವರಿಗೆ 4 ಗುಂಟೆ, ಲಿಂಗೇಗೌಡರವರಿಗೆ 5. 1/2 ಗುಂಟೆ, ಸಿದ್ದೇಗೌಡರವರಿಗೆ 5 ಗುಂಟೆ ಮಾರಾಟ ಮಾಡಲಾಗಿದೆ ಎಂದರೆ ಸರಿ. ನಂತರ ಅದೇ ಸರ್ವೆ ನಂಬರ್‌ನಲ್ಲಿ 1 ಮತ್ತು 2 ನೇ ಪ್ರತಿವಾದಿಗಳಿಗೆ ತಲಾ ಒಂದು ಎಕರೆ ಮಾರಾಟ ಮಾಡಲಾಗಿದೆ ಎಂದರೆ ಸರಿಯಲ್ಲ. ಮಾರಾಟ ಮಾಡಿದ ಸ್ವತ್ತುಗಳನ್ನು ಹೊರತುಪಡಿಸಿ, ನಾಗಮ್ಮರವರಿಗೆ 9 ಗುಂಟೆ ಉಳಿಯುತ್ತಿದೆ ಎಂದರೆ ಸರಿ. ಸದರಿ 9 ಗುಂಟೆ ಜಮೀನನ್ನು ನಾನು ಅಕ್ರಮವಾಗಿ ಖಾತೆ ಮಾಡಿಸಿಕೊಂಡು ವಿಶ್ವಕುಮಾರ್‌ರವರಿಗೆ ಮಾರಾಟ ಮಾಡಿದ್ದೇನೆ ಎಂದರೆ ಸರಿಯಲ್ಲ. ನಾಗಮ್ಮರವರೊಂದಿಗೆ ಹುಟ್ಟಿದವರಿಗೆ ವಿಚಾರ ತಿಳಿಸದೇ ಆಸ್ತೆಯನ್ನು ಕಬಳಿಸುವ ಸಲುವಾಗಿ ನನ್ನ ಹೆಸರಿಗೆ ಖಾತೆ ಮಾಡಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಎ.ಸಿ. ನ್ಯಾಯಾಲಯಲದಲ್ಲಿ ನನ್ನ ಅಜ್ಜಿ ನಾಗಮ್ಮ ಮೇಲ್ಮನವಿ ಸಲ್ಲಿಸಿರುತ್ತಾರೆ. ಅಕ್ರಮವಾಗಿ 1 ಮತ್ತು 2 ನೇ ಪ್ರತಿವಾದಿಗಳು ಆಸ್ತಿ ತಮ್ಮ ಹೆಸರಿಗೆ ಮಾಡಿಕೊಂಡಿದ್ದಾರೆ ಎಂದು ಸಲ್ಲಿಸಲಾಗಿತ್ತು.

5. ಸದರಿ ಮೇಲ್ಮನವಿಯಲ್ಲಿ 1 ಮತ್ತು 2 ನೇ ಪ್ರತಿವಾದಿಗಳ ಪರ ಆದೇಶವಾಗಿರುತ್ತದ. ಜಿಲ್ಲಾ ನ್ಯಾಯಾಲಯದಲ್ಲಿ ವಜಾ ಆಗಿರುತ್ತದೆ. ಆ ಬಗ್ಗೆ

ದಾಖಲೆಯನ್ನು ಹಾಜರುಪಡಿಸಿಲ್ಲ. ಇದೇ ಸ್ವತ್ತಿನ ವಿಚಾರಕ್ಕೆ 1 ಮತ್ತು 2ನೇ ಪ್ರತಿವಾದಿಗಳು ಕೆಳ ನ್ಯಾಯಾಲಯದಲ್ಲಿ ದಾವೆ ಸಲ್ಲಿಸಿದ್ದರು ಎಂದರೆ ಸರಿ. ಅದು ವಜಾಗೊಂಡಿರುತ್ತದೆ. ಸದರಿ ದಾವೆಯಲ್ಲಿ 1 ಮತ್ತು 2ನೇ ಪ್ರತಿವಾದಿಗಳ ಪರ ಆದೇಶವಾಗಿರುತ್ತದೆ ಎಂದರೆ ಸರಿಯಲ್ಲ. ನಮ್ಮ ಅಜ್ಜಿ ನಾಗಮ್ಮರವರು ಸಲ್ಲಿಸಿದ್ದ ಮೇಲ್ಮನವಿ ಎ.ಸಿ. ನ್ಯಾಯಾಲಯದಲ್ಲಿ ವಜಾ ಆಗಿರುತ್ತದೆ ಎಂದರೆ ಸರಿ. ನಾಗಮ್ಮನಿಗೆ ಅವರ ತಂದೆ ದೊಡ್ಡೇಗೌಡರವರು 2 ಎಕರೆ 38 ಗುಂಟೆ ಜಮೀನಿನಲ್ಲಿ 1 ಮತ್ತು 2ನೇ ಪ್ರತಿವಾದಿಗಳಿಗೆ ತಲಾ 1 ಎಕರೆ ಮಾರಾಡ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಆ ನಂತರ 1 ಮತ್ತು 2ನೇ ಪ್ರತಿವಾದಿಗಳು ಆ ಸ್ವತ್ತನ್ನು ತನ್ನ ಅಣ್ಣ ಅಪ್ಪಯ್ಯ @ ಲಿಂಗಗೌಡರವರಿಗೆ ಬಿಟ್ಟುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಅಪ್ಪಯ್ಯರವರು ತನಗೆ ಬಂದ ಆಸ್ತಿಯನ್ನು ತನ್ನ ಮಕ್ಕಳಾದ ಚಿಕ್ಕೇಗೌಡ ಮತ್ತು ಮಹದೇವುರವರ ಹೆಸರಿಗೆ ಖಾತೆ ಮಾಡಿಸಿರುತ್ತಾರೆ ಎಂದರೆ ಸರಿ. ಸಾಕ್ಷಿ ಸುಳ್ಳು ಖಾತೆ ಮಾಡಿಸಿದ್ದಾರೆ ಎಂದು ಉತ್ತರಿಸುತ್ತಾರೆ.

6. ಪ್ರತಿವಾದಿ 1 ಮತ್ತು 2ರವರು ತಮ್ಮ ಹೆಸರಿಗೆ ಖಾತೆ ಮಾಡಿಸಿಕೊಂಡು ಅವರೇ ಸ್ವಾಧೀನಾನುಭವದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ನಾಗಮ್ಮರವರು 2012ರಲ್ಲಿ ಮೃತಪಟ್ಟಿರುತ್ತಾರೆ. ನಾಗಮ್ಮರವರ ಆಸ್ತಿಯನ್ನು ಕಬಳಿಸಲು ಅವರಿಗೆ ಒಬ್ಬನೇ ಮಗ ಎಂದು ಸುಳ್ಳು ದಾಖಲೆಗಳನ್ನು ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ದಿ: 24.07.1950ರ ಕ್ರಯಪತ್ರದ ರದ್ದಿಯಾತಿ ಪತ್ರವನ್ನು ಹಾಜರುಪಡಿಸಿದ್ದೇನೆ. ದಿ: 05.07.1950ರಂದು ದಾನಪತ್ರವನ್ನು ದೊಡ್ಡೇಗೌಡರವರು ನಾಗಮ್ಮರವರಿಗೆ ಬರೆದುಕೊಟ್ಟಿದ್ದಾರೆ. ದಾನಪತ್ರದಲ್ಲಿ ಉತ್ತರಕ್ಕೆ ಉಳಿಕೆ 2 ಎಕರೆ ಜಮೀನನ್ನು ಉಳಿಸಿಕೊಂಡು ದಕ್ಷಿಣದ ಕಡೆ 1 ಎಕರೆ ಜಮೀನನ್ನು ಮಾತ್ರ ದಾನ ಬರೆದಿರುತ್ತಾರೆ ಎಂಧರೆ ಸರಿಯಲ್ಲ. ನಮಗೆ ದಾನವಾಗಿ ಬಂದ ಸ್ವತ್ತನ್ನು ಈಗಾಗಲೇ ಮಾರಾಟ ಮಾಡಿದ್ದು, ಪ್ರತಿವಾದಿಗಳ ಸ್ವತ್ತನ್ನು ಕಬಳಿಸುವ ಸಲುವಾಗಿ ಸುಳ್ಳು ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

**ವಕೀಲರ ವಿನಂತಿ ಮೇರೆಗೆ ಮುಂದುವರಿದ ಪಾಟೀ ಸವಾಲಿಗೆ ಸಮಯಾವಕಾಶ ನೀಡಿ ಮುಂದೂಡಲಾಯಿತು.**

ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ
ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಎಂ ಎ ಸಿ ಟಿ, ಮಳವಳ್ಳಿ.